ಮೂಲಕ ಸದಸ್ಯರುಗಳನ್ನು ನೇಮಕ ಮಾಡುವ ಸಂಪ್ರದಾಯವನ್ನು ಸರ್ಕಾರ ಕೈಬಿಡುವುದೇ ?

ಇ) ಹಾಗಿದ್ದಲ್ಲಿ, ಆ ಬಗ್ಗೆ ಸಹಕಾರ ಕಾಯಿದೆಗೆ ಯಾವಾಗ ತಿದ್ದುಪಡಿ ತರಲಾಗುವುದು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು) :

ಅ) ಸರ್ಕಾರವು ಷೇರು ಬಂಡವಾಳ ನೀಡಿರುವ ಅಥವಾ ಸಾಲಗಳ ಮರು ಪಾವತಿಗೆ ಖಾತರಿ ನೀಡಿರುವಂತಹ ಸಹಕಾರಿ ಸಂಸ್ಥೆಗಳಿಗೆ ನಾಮಕರಣ ಮಾಡಲು ಅವಕಾಶವು ಕರ್ನಾಟಕ ಸಹಕಾರ ಸಂಘಗಳ ಕಾಯಿದೆ 1959 ಇದರಲ್ಲಿ ಕಾಯ್ದೆ ಜಾರಿಗೆ ಬಂದಾಗಿನಿಂದಲೂ ಇದೆ.

ಆ) ಇಲ್ಲ

ಇ) ಉದ್ಭವಿಸುವುದಿಲ್ಲ.

ಬೀದರ್ ಜಿಲ್ಲೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಬಳಸಿ ಬೆಳೆ ಬೆಳೆಯುವ ರೈತರಿಗೆ ತರಬೇತಿ.

383 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೃಷಿ ಇಲಾಖೆಯಿಂದ ಬೀದರ್ ಜಿಲ್ಲೆಯಲ್ಲಿನ ರೈತರುಗಳಿಗೆ ಆಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು ಬೆಳೆ ಬೆಳೆಯುವ ಬಗ್ಗೆ ತರಬೇತಿಯನ್ನೇನಾದರೂ ನೀಡಲಾಗುತ್ತಿದೆಯೇ ?

ಆ) ನೀಡಲಾಗಿದ್ದಲ್ಲಿ ಇದರ ಪ್ರಯೋಜನವನ್ನು ಜಿಲ್ಲೆಯ ಯಾವ ಯಾವ ಭಾಗದ ರೈತರುಗಳು ಉಪಯೋಗಿಸಿ ಕೊಂಡಿದ್ದಾರೆ.

ಇ) ಆದಕ್ಕಾಗಿ ಕಳೆದ ಒಂದು ವರ್ಷದಲ್ಲಿ ವೆಚ್ಚ ಮಾಡಲಾಗಿರುವ ಹಣವೆಷ್ಟು ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ (ಕೃಷಿ ಸಚಿವರು) :

ಅ) ಕೃಷಿ ಇಲಾಖೆಯ ವತಿಯಿಂದ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಒಂದು ಕೃಷಿ ಪಾಠಶಾಲೆ ಸ್ಥಾಪಿಸಲಾಗಿದ್ದು ಆ ಜಿಲ್ಲೆಯ ರೈತ ಮಕ್ಕಳಿಗೆ ಕೃಷಿ ಆಧುನಿಕ ತಂತ್ರಜ್ಞಾನದ ಬಗ್ಗೆ ತರಬೇತಿ ನೀಡಲಾಗುತ್ತಿದೆ.

ಆ) ಇದರ ಪ್ರಯೋಜನವನ್ನು ಜಿಲ್ಲೆಯಲ್ಲಿರುವ ಎಲ್ಲಾ ತಾಲ್ಲೂಕುಗಳ ರೈತರ ಮಕ್ಕಳು ಪಡೆದುಕೊಳ್ಳುತ್ತಿದ್ದಾರೆ.

ಇ) ಈ ತರಬೇತಿಗಾಗಿ 1992-93ನೇ ಸಾಲಿನಲ್ಲಿ ರೂ. 96,315-00 ಖರ್ಚಾಗಿರುತ್ತದೆ.

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

(1) ತಾಲ್ಲೂಕುಗಳಲ್ಲಿ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಸಮಿತಿಗಳಿಗೆ ಶಾಸಕರುಗಳನ್ನು ಅಧ್ಯಕ್ಷರನ್ನಾಗಿ ಮಾಡುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ ಎಲ್ಲಾ ತಾಲ್ಲೂಕುಗಳಲ್ಲಿ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವ ಸಮಿತಿಗಳನ್ನು ಮಾಡಿದ್ದಾರೆ. ಪ್ರತಿಯೊಂದು ಕ್ಷೇತ್ರದಲ್ಲಿ ಆಯಾಯಾ ತಾಲ್ಲೂಕುಗಳಲ್ಲಿ ಹೆಚ್ಚು ಕ್ಷೇತ್ರವನ್ನು ಯಾರು ಪ್ರತಿನಿಧಿಸುತ್ತಿದ್ದಾರೆ ಅವರು ಅಧ್ಯಕ್ಷರಾಗಿದ್ದಾರೆ. ಆದರೆ ಕರ್ನಾಟಕದಲ್ಲಿ ಒಂದು ವಿಚಿತ್ರ ಕ್ಷೇತ್ರ ಅಂದ್ರೆ ಇವತ್ತು ಬಂಟ್ವಾಳ ತಾಲ್ಲೂಕು ವಿಟ್ಲ ಕ್ಷೇತ್ರದಲ್ಲಿ ಆ ತಾಲ್ಲೂಕಿನಲ್ಲಿ ಹೆಚ್ಚು ಕ್ಷೇತ್ರವನ್ನು ಪ್ರತಿನಿಧಿಸುವಂತಹ ರುಕ್ಮಯಪೂಜಾರಿಯವರಿಗೆ ಇದುವರೆಗೂ ಅಧ್ಯಕ್ಷರನ್ನಾಗಿ ಮಾಡಿಲ್ಲ.